# <u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ</u>

ಸಿಸಿ ನಂ. 389/2020

ಚಾಸಾ-05 ಪ್ರಾಸಾ-05

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ ಪಡೆದುಕೊಳ್ಳಲಾಯಿತು.
ದಿನಾಂಕ: 29-12-2025

| | |
|---|---|
| ಹೆಸರು | : ರಾವುತಪ್ಪ |
| ತಂದೆಯ ಹೆಸರು | : ಬಸಪ್ಪ |
| ವಯಸ್ಸು | : 33 ವರ್ಷ |
| ಉದ್ಯೋಗ | : PC-571 |
| ವಾಸಸ್ಥಳ | : ನೆಲೋಗಿ ಪಿ.ಎಸ್. |

<u>ಮುಖ್ಯ ವಿಚಾರಣೆ ಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ</u> :-

2016 ರಿಂದ 2022 ರವರೆಗೆ ಅಫಜಲಪುರ ಪೋಲಿಸ ಠಾಣೆಯಲ್ಲಿ ಪೋಲಿಸ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 03-11-2020 ರಂದು ನಾನು ಮತ್ತು ಚಾಸಾ 4 ರವರು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ 1 ರವರು ನಮಗೆ ತಿಳಿಸಿದ್ದೇನೆಂದರೆ ಮಲ್ಲಾಬಾದ ಗ್ರಾಮದ ಲಕ್ಷ್ಮೀ ದೇವಸ್ಥಾನದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಹೋಗಿಬರುವ ಜನರಿಗೆ ಮಟಕಾ ನಂಬರ ಬರೆದುಕೊಡುತ್ತಿದಾನೆ, 1 ರೂ. ಗೆ 80 ರೂ. ಎಂದು ಜನರನ್ನು ಮನವೂಲಿಸಿ ಅವರಿಂದ ಹಣ ಪಡೆದು ಅವರಿಗೆ ಅಂಕಿ ಸಂಖ್ಯೆ ಚೀಟಿ ಬರೆದುಕೊಡುತ್ತಿದ್ದಾನೆ ಎಂದು ಮಾಹಿತಿ ಬಂದಿರುತ್ತದೆ ಆದ್ದರಿಂದ ದಾಳಿ ಮಾಡುವುದಿದ್ದು ಅದಕಾಗಿ ಚಂದಪ್ಪ ಮತ್ತು ಶಿವಪ್ಪ ಎನ್ನುವವರನ್ನು ಠಾಣೆಗೆ ಕರೆದುಕೊಂಡು ಬಂದು ಅವರಿಗೆ ಭಾತ್ಮಿ ವಿಷಯ ತಿಳಿಸಿ ಪಂಚರಾಗಲು ಕೋರಿದ್ದು ಸದರಿಯವರು ಒಪಿಕೊಂಡ ಮೇರೆಗೆ ಸಾಯಂಕಾಲ 4-45 ಕ್ಕೆ ನಾನು, ಚಾಸಾ 1, 4 ಮತ್ತು ಪಂಚರು ಸೇರಿ ಮಲ್ಲಾಬಾದ ಗ್ರಾಮಕ್ಕೆ ಹೊರಟೆವು.

ಸಾಯಂಕಾಲ 5 ಗಂಟೆಗೆ ಮಲ್ಲಾಬಾದ ಗ್ರಾಮ ತಲುಪಿ ಬಸ ನಿಲ್ದಾಣ ಹತ್ತಿರ ನಮ್ಮ ವಾಹನ ನಿಲ್ಲಿಸಿ ದೇವಸ್ಥಾನ ಹತ್ತಿರ ನಡೆದುಕೊಂಡು ಹೋಗಿರುತ್ತೇವೆ. ದೇವಸ್ಥಾನದ ಹತ್ತಿರ ಮರೆಯಲ್ಲಿ ನಿಂತು ನೋಡಿ ಅಲ್ಲಿ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಸಾರ್ವಜನಿಕರಿಂದ ಹಣ ಪಡೆದು ನಂಬರ ಬರೆದುಕೊಡುತ್ತಿರುವುದು ಕಂಡುಬಂದಿರುತ್ತದೆ. ನಂತರ 5-15 ಕ್ಕೆ ಆತನ ಮೇಲೆದಾಳಿ ಮಾಡಿ ವಿಚಾರಿಸಿದಾಗ ಆತನ ಹೆಸರು ಗಣಪತಿ ತಂದೆ ಬಸಣ್ಣ ಸಾ. ಮಲ್ಲಾಬಾದ ಅಂತ ತಿಳಿಸಿರುತ್ತಾನೆ. ಸದರಿ ವ್ಯಕ್ತಿ ಅಂಗ ಶೋದನೆ ಮಾಡಿ ನೋಡಿದಾಗ ಆತನ ಬಳಿ ರೂ. 1250/- ಒಂದು ಬಾಲ ಪೆನ್ನು ಮತ್ತು ಒಂದು ಚೀಟಿ ದೊರೆತಿರುತ್ತದೆ. ಅವುಗಳನ್ನು ಪಂಚರ ಸಮಕ್ಷಮ 5-15 ರಿಂದ 6-15 ರವರೆಗೆ ಜಪ್ತಿ ಪಂಚನಾಮೆ ಮಾಡಿ ಜಪ್ತಿ ಪಡಿಸಿಕೊಂಡಿರುತ್ತಾರೆ. ನಾನು ಈ ಕುರಿತು ಚಾಸಾ 6 ರವರ ಮುಂದೆ ಹೇಳಿಕೆ ನೀಡಿರುತ್ತೇನೆ.

ಜಪ್ತಿ ಪಡಿಸಿಕೊಂಡ ಮುದ್ದೆಮಾಲು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಗೆ ನೋಡಿ ಗುರುತಿಸುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ **ASK** ವಕೀಲರಿಂದಃ-

ನಮ್ಮ ಸರಕಾರಿ ಜೀಪ ಸಂಃ KA 03 G 1110 ಇರುತ್ತದೆ. ನನ್ನ ಹೇಳಿಕೆಯಲ್ಲಿ ಜೀಪ ನಂಬರ ತಿಳಿಸಿಲ್ಲ ಎಂದರೆ ಸರಿ. ರೂ. 1250/- ಗಳು ರೂ. 100 ಮತ್ತು 10 ಮುಖಬೆಲೆಯ ನೋಟುಗಳು ಇರುತ್ತವೆ. ಬಾಲ ಪೆನ ಯಾವ ಕಂಪನಿಯದು ಎಂದು ಗೊತ್ತಿಲ್ಲ ಆದರೆ ಅದು 5 ರೂಪಾಯಿದು ಇತ್ತು. ಮಟಕಾ ಚೀಟಿ ಯಲ್ಲಿ 32, 41, 72 ಹೀಗೆ ಅಂಕಿ ಸಂಖ್ಯೆಗಳನ್ನು ಬರೆಯಲಾಗಿತ್ತು. ಮಲ್ಲಾಬಾದ ಬಸನಿಲ್ದಾಣದಿಂದ ದೇವಸ್ಥಾನ ಅರ್ಧ ಕಿ.ಮಿ. ಇದೆ ಎಂದರೆ ಸರಿಯಲ್ಲ. ಮಲ್ಲಾಬಾದ ಬಸನಿಲ್ದಾಣದಿಂದ ದೇವಸ್ಥಾನ ಕ್ಕೆ ಹೋಗಲು 7-8 ನಿಮಿಷ ಬೇಕಾಗತ್ತದೆ ಎಂದರೆ ಸರಿಯಲ್ಲ. ನಾವು ದೇವಸ್ಥಾನದ ಪೂರ್ವದಿಕ್ಕಿಗೆ ಮರೆಯಾಗಿ ನಿಂತಿದ್ದೆವು. ದೇವಸ್ಥಾನದ ಹಿಂಭಾಗ ಪಶ್ಚಿಮ ದಿಕ್ಕಿಗೆ ಇರುತ್ತದೆ ಎಂದರೆ ಸರಿ. ದೇವಸ್ಥಾನದ ಹಿಂದೆ ಮರೆಯಾಗಿ ನಿಲ್ಲಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಇವತ್ತೆ ಮೊದಲ ಬಾರಿ ನೋಡುತ್ತಿದೇನೆ ಎಂದರೆ ಸರಿಯಲ್ಲ. ಜಪ್ತಿ ಪಂಚನಾಮೆ ಠಾಣೆಯಲ್ಲಿ ಬರೆದಿರುತ್ತೇನೆ ಎಂದು ಸೂಚಿಸುವುದು ಎಂದರೆ ಸರಿಯಲ್ಲ. ಆರೋಪಿ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಮುದ್ದೆಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ - ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ